

ಕೇಟ್ ಎಲಿಜಬೆತ್ ಪತಿ ಲಕ್ಕಿ ಅಲಿ ಮತ್ತು ಮಗ ಡ್ಯಾನಿ ಜತೆಗೆ

# ಶೂಟಿಂಗಿಗೆಂದು ಬಂದಾಕೆ ಮದುವೆಯಾಗಿ ನೆಲೆಸಿದರು!

ಅದು 2010ನೇ ಇಸವಿ. ಇಂಗ್ಲೆಂಡ್‌ನ ನಟಿ, ಮಾಡೆಲ್ ಕೇಟ್ ಎಲಿಜಬೆತ್ ಹ್ಯಾಲಮ್ ಬೆಂಗಳೂರಿನ ಯಲಹಂಕಕ್ಕೆ ಬಂದಿದ್ದರು. ಬಂದ ಉದ್ದೇಶ ಸಿನಿಮಾವೊಂದರಲ್ಲಿ ನಟನೆ. ಇದೇ ಸಿನಿಮಾಕ್ಕೆ ಬಾಲಿವುಡ್ ಹಿನ್ನೆಲೆ ಗಾಯಕ ಲಕ್ಕಿ ಅಲಿ ಅವರ ಸಂಗೀತ. ನಡೆದದ್ದು ಕೆಲವೇ ದಿನ ಶೂಟಿಂಗ್. ಆರ್ಥಿಕ ಮುಗ್ಗಟ್ಟಿನ ನೆಪದಲ್ಲಿ ಸಿನಿಮಾ ಶೂಟಿಂಗ್‌ಗೆ ತೆರೆ ಬಿತ್ತು. ಇದೇ ಸಮಯದಲ್ಲಿ ಲಕ್ಕಿ ಅಲಿ ಜತೆ ಕೇಟ್ ಎಲಿಜಬೆತ್‌ಗೆ ಆದ ಪರಿಚಯ ಪ್ರೇಮಕ್ಕೆ ತಿರುಗಿತು. ಹೆತ್ತವರು, ಕೆಲವೇ ಆಪ್ತ ಸ್ನೇಹಿತರು, ಹಿತೈಷಿಗಳ ಸಮ್ಮುಖದಲ್ಲಿ ಯಲಹಂಕದಲ್ಲೇ ಮದುವೆಯೂ ಆಯಿತು. ದೂರದ ಇಂಗ್ಲೆಂಡ್‌ನಿಂದ ಸಿನಿಮಾ ನೆಪದಲ್ಲಿ ಬೆಂಗಳೂರಿಗೆ ಬಂದರೂ ಕೇಟ್‌ಗೆ ಬದುಕು ಕೈ ಹಿಡಿಯಿತು; ಸಿನಿಮಾ ಕೈಕೊಟ್ಟಿತು.

ಬದುಕು ಹೇಗೆ ಅನಿರೀಕ್ಷಿತ ತಿರುವು ಪಡೆಯುತ್ತದೆ ಎಂಬುದಕ್ಕೆ ಕೇಟ್ ಎಲಿಜಬೆತ್ ಉದಾಹರಣೆ. ಎತ್ತಣ ಇಂಗ್ಲೆಂಡ್.. ಎತ್ತಣ ಯಲಹಂಕ..! ಲಕ್ಕಿ ಅಲಿ ಖ್ಯಾತ ಸಿನಿಮಾ ಸಂಗೀತಗಾರ. ಮೇಲಾಗಿ ಸಂಗೀತ ನಿರ್ದೇಶಕ. ಗೀತರಚನೆಕಾರ ಜತೆಗೆ ನಟ ಕೂಡ. ವಯಸ್ಸಿನಲ್ಲಿ ಕೇಟ್‌ಗಿಂತ ಸುಮಾರು 18 ವರ್ಷಗಳಷ್ಟು ದೊಡ್ಡವರು. ದೇಶ, ಭಾಷೆ, ಜಾತಿ, ಸಂಸ್ಕೃತಿ ಎಲ್ಲವನ್ನೂ ಮೀರಿ ಇಬ್ಬರೂ ಪರಸ್ಪರ ಮೆಚ್ಚಿದರು. ಮದುವೆಯೂ ಆದರು. ಈ ಬಗ್ಗೆ ಕೇಟ್ ಅವರನ್ನು ಕೇಳಿದರೆ ಈ ಚೆಲುವೆ ಹೇಳಿದ್ದು ಒಂದೇ ವಾಕ್ಯ. 'ರಿಲಿಜಿಯನ್ ಡಿವೈಡ್ಸ್; ಫೈತ್ ಯುನೈಟ್ಸ್!'. ನಾಲ್ಕು ವರ್ಷದ ಡ್ಯಾನಿ ಇವರಿಬ್ಬರ ಕಣ್ಮಣಿ.

ಹೌದು, ಕೇಟ್ ಎಲಿಜಬೆತ್ ಈಗ ಭಾರತದ ಸೊಸೆ. ಕೇಟ್ ಎಲಿಜಬೆತ್ ಹ್ಯಾಲಮ್ ಇಂಗ್ಲೆಂಡ್‌ನಿಂದ 2010ರಲ್ಲಿ ಬಂದವರು. ಯಲಹಂಕದಲ್ಲಿ ವಾಸವಿರುವ ಕೇಟ್, ಬ್ರಿಟಿಷ್ ಫ್ಯಾಷನ್ ಮಾಡೆಲ್, ನಟಿ, ಮತ್ತು ಹೇರ್ ಸ್ಟುಡಿಯೊ ಒಂದಕ್ಕೆ ಬ್ರ್ಯಾಂಡ್ ಅಂಬಾಸಿಡರ್ ಆಗಿದ್ದಾರೆ.

'ಇಲ್ಲಿನ ಸಂಸ್ಕೃತಿ ಚೆನ್ನಾಗಿದೆ. ನಾನು ಇಲ್ಲಿನ ಆಚರಣೆ, ಸಂಸ್ಕೃತಿ ಸಂಪ್ರದಾಯಗಳನ್ನು ಗೌರವಿಸುತ್ತೇನೆ. ಇಲ್ಲಿ ನೆಮ್ಮದಿಯಾಗಿದ್ದೇನೆ ಎನ್ನುವ ಕೇಟ್ ಲಕ್ಕಿ ಅಲಿ ಅವರನ್ನು ಮದುವೆಯಾದದ್ದು ನನ್ನ ಲಕ್' ಎಂದು ನಗುತ್ತಾರೆ.

'ಅಡುಗೆ ಮಾಡುವುದು ನಾನು ಅತ್ಯಂತ ಪ್ರೀತಿಸುವ ಕೆಲಸಗಳಲ್ಲಿ ಒಂದು. ಆರೋಗ್ಯದ ಬಗ್ಗೆ ಬಹಳ ಕಾಳಜಿ ಇದೆ. ಫ್ಯಾಷನ್, ಸೌಂದರ್ಯದ ಬಗ್ಗೆ ವಿಪರೀತ ಆಸಕ್ತಿ. ನಾನು ಮಾಡೆಲಿಂಗ್ ಮಾಡುತ್ತಿರುವಾಗ ಕೆಲವೊಂದು ಡಯಟ್, ವ್ಯಾಯಾಮ ಫಿಟ್‌ನೆಸ್ ತಂತ್ರಗಳನ್ನು ಅಭ್ಯಾಸ ಮಾಡಿಕೊಂಡಿದ್ದೆ. ಅದನ್ನು ಈಗಲೂ ಮುಂದುವರಿಸುತ್ತಿದ್ದೇನೆ. ವಾರದ ಐದು ದಿನಗಳಲ್ಲಿ ಸಾಕಷ್ಟು ಹಣ್ಣು ತರಕಾರಿಗಳನ್ನು ಸೇವಿಸುತ್ತೇನೆ. ಉಳಿದ ಎರಡು ದಿನ ಮಾತ್ರ ಮಾಂಸಾಹಾರಕ್ಕೆ ಮೀಸಲು' ಎನ್ನುತ್ತಾರೆ ಕೇಟ್.

ಇಂಗ್ಲೆಂಡ್‌ನ ಸುಂದರ ನಗರ ಡೆರ್ಬಿಶೈರ್‌ನಲ್ಲಿ ನನ್ನ ತಂದೆ ತಾಯಿ ತಮ್ಮ ಇದ್ದಾರಂತೆ. ವರ್ಷಕ್ಕೆ ಒಂದೆರಡು ಬಾರಿ ಅಲ್ಲಿಗೆ ಹೋಗಿ ಬರುತ್ತಾರೆ. ಅವರೂ ಇಲ್ಲಿಗೆ ಬಂದು ಹೋಗುತ್ತಿರುತ್ತಾರಂತೆ.

'ಇಂಗ್ಲೆಂಡ್‌ನಲ್ಲಿ ನಡೆದ ಸೌಂದರ್ಯ ಸ್ಪರ್ಧೆ (ಬ್ಯೂಟಿ ಕ್ವೀನ್ ಕಂಟೆಸ್ಟ್)ಯಲ್ಲಿ ಪ್ರಥಮ ಬಹುಮಾನ ಪಡೆದ ಕ್ಷಣ ನನ್ನ ಜೀವನದಲ್ಲಿ ಅತ್ಯಂತ ಸಂತಸ ಮತ್ತು ನೆನಪಿನಲ್ಲಿ ಉಳಿಯುವ ವಿದ್ಯಮಾನ ಎನ್ನುವ ಕೇಟ್, 'ಲುಕ್ ಗುಡ್, ಫೀಲ್ ಗುಡ್' ಎಂಬ ಮಂತ್ರ ಸದಾ ನೆನಪಿನಲ್ಲಿ ಉಳಿಯುವಂಥದ್ದು' ಎನ್ನುತ್ತಾರೆ.

## ಕೂದಲ ಕಾಳಜಿ

ಕೂದಲಿನ ಗುಣಮಟ್ಟ ಮತ್ತು ಉತ್ತಮ ಬೆಳವಣಿಗೆ ಕಡೆ ಗಮನ ಹರಿಸುತ್ತೇನೆ, ಇದಕ್ಕಾಗಿ ಬೆಳಿಗ್ಗೆ ದಿನಾ ಒಂದು ಚಮಚ ಆಲಿವ್ ಎಣ್ಣೆಗೆ ನೀರು ಬೆರೆಸಿ ಕುಡಿಯುತ್ತೇನೆ, ಇದು ಕೂದಲು, ಚರ್ಮ ಮತ್ತು ಹಲ್ಲಿನ ಆರೋಗ್ಯಕ್ಕೆ ಸಹಕಾರಿ. ಜತೆಗೆ ಬಾದಾಮಿಯನ್ನು ನೀರಿನಲ್ಲಿ ನೆನೆಸಿ ತಿನ್ನುವುದು ಕೂಡ ಕೂದಲಿಗೆ ಒಳ್ಳೆಯದು. ಗ್ರೀನ್ ಟೀ ಕೂದಲನ್ನು ಗಟ್ಟಿಗೊಳಿಸುತ್ತದೆ. ಆಹಾರ ಪಥ್ಯ ಕೂದಲಿನ ಬೆಳವಣಿಗೆಗೆ ಸಹಾಯಕ ಎಂದು ಕೂದಲ ಆರೈಕೆ ಬಗ್ಗೆ ತಮ್ಮದೇ ವ್ಯಾಖ್ಯಾನ ನೀಡುತ್ತಾರೆ ಕೇಟ್.

ವ್ಯಾಯಾಮ, ಈಜು ನನ್ನ ಪ್ರಿಯವಾದ ಹವ್ಯಾಸ. ಇತ್ತೀಚೆಗಷ್ಟೇ ಧ್ಯಾನ, ಯೋಗ ಮತ್ತು ಪ್ರಾಣಾಯಾಮವನ್ನು ಆರಂಭಿಸಿದ್ದೇನೆ. ಮೀನು, ಚಿಕನ್, ಸಲಾಡ್‌ಗಳನ್ನು ತಿನ್ನಲು ನಾನು ಅತ್ಯಂತ ಇಷ್ಟಪಡುತ್ತೇನೆ, ಉತ್ತಮ ಆರೋಗ್ಯ ಕಾಪಾಡುವುದಕ್ಕಾಗಿ ದಿನಾ ಎಳನೀರು ಕುಡಿಯುವ ಅಭ್ಯಾಸ ಮಾಡಿಕೊಂಡಿದ್ದೇನೆ.

ಮಗ ಡ್ಯಾನ್‌ಗೆ ಅಕರೋಟು, ದಾಲ್, ರೋಟಿ ತುಂಬ ಇಷ್ಟ. ಅಡುಗೆ ಮಾಡುವುದನನ್ನು ಅದರಲ್ಲೂ ಚಿಕನ್ ಫ್ರೈ, ಬಟರ್ ಚಿಕನ್, ವೆಜ್ ಪಲಾವ್, ದಾಲ್, ಸಾಂಬಾರ್ ಮಾಡುವುದನ್ನು ಕಲಿತಿದ್ದೇನೆ ಎನ್ನುವ ಕೇಟ್, ಅವರ ಪತಿ ಲಕ್ಕಿ ಅಲಿ ಅವರಿಗೂ ಚಿಕನ್ ಅಡುಗೆಗಳು ಇಷ್ಟವಂತೆ. ಮಳೆಗಾಲ ತುಂಬ ಇಷ್ಟ, ಮಳೆಯ ಶಬ್ದ ಕೇಳುತ್ತಾ ಅಡುಗೆ ಮಾಡುವುದು ಅತ್ಯಂತ ಪ್ರಿಯವಾದ ಹವ್ಯಾಸವಂತೆ.

'ಕರ್ನಾಟಕದ ಪ್ರವಾಸಿ ತಾಣಗಳು ತುಂಬ ಚೆನ್ನಾಗಿವೆ. ಮೈಸೂರು, ಊಟಿ, ಮಧುಮಲೈ, ಕೊಡಗು ಮುಂತಾದ ತಾಣಗಳನ್ನು ನೋಡಿದ್ದೇವೆ. ವಾರಾಂತ್ಯದಲ್ಲಿ ಮನೆಯಲ್ಲೇ ಕುಟುಂಬದ ಸದಸ್ಯರೊಂದಿಗೆ ಕಳೆಯುತ್ತೇನೆ. ಹಲವು ಮಂದಿ ಭಾರತೀಯ ಸ್ನೇಹಿತರಿದ್ದಾರೆ. ಬೆಂಗಳೂರು ಸಿಟಿಯನ್ನು ಬಹಳ ಇಷ್ಟಪಡುತ್ತೇನೆ.

'ಕನ್ನಡ ಭಾಷೆ ಕೇಳಲು ಬಹಳ ಇಷ್ಟ. ಮಾತನಾಡಲು ಇಷ್ಟ. ಹೀಗಾಗಿ ಕನ್ನಡ ಕಲಿಯುತ್ತಿದ್ದಾರಂತೆ. ಇಲ್ಲಿನ ಹಬ್ಬಗಳ ಆಚರಣೆಯಂತೂ ಅದ್ಭುತ. ಇವೆಲ್ಲವನ್ನೂ ಇಷ್ಟಪಡುತ್ತಾರಂತೆ.

★ ಅವನೀಶ್